## ಸೂಕ್ತಿಪ್ರಭ

ನಿಮ್ಮ ಕನಸುಗಳೆಲ್ಲವನ್ನು ಸಾಕಾರಗೊಳಿಸಲು ಇರುವುದೊಂದೇ ಒಂದು ಬದುಕು ಎಂಬುದನ್ನು ಮರೆಯದಿರಿ. ಸಾಕಾರಗೊಳಿಸಲಾಗದ್ದನ್ನು ಕನಸು ಕಾಣುತ್ತಾ ಸಮಯ ನಷ್ಟ ಮಾಡದಿರಿ.

✻ ✻

ತೋರಿಕೆಗೆ ಚೆನ್ನಾಗಿ ಕಾಣುವುದರ ಬೆನ್ನ ಹಿಂದೆ ಬೀಳಬೇಡಿ, ಅವು ನಿಮ್ಮನ್ನು ಯಾಮಾರಿಸಬಹುದು, ಸಂಪತ್ತಿನ ಹಿಂದೆಯೂ ಸಹ, ಕಾರಣ ಅದೂ ಕ್ಷಯಿಸುತ್ತದೆ. ನಿಮ್ಮನ್ನು ನಲಿಸುವವರ ಸಹವಾಸ ಮಾಡಿ, ಕಾರಣ ಮಬ್ಬು ಕವಿದ ದಿನವನ್ನು ಬೆಳಗುವಂತೆ ಮಾಡುವುದಕ್ಕೆ ಬೇಕಾಗಿರುವುದು ಒಂದು ಮಂದಹಾಸದ ಬೆಳಕಷ್ಟೆ.

✻ ✻

ವ್ಯಕ್ತಿಯೊಬ್ಬರನ್ನು ನಮಗೆ ಅತ್ಯಂತ ಬೇಕಾಗಿರುವರೆಂದು ಎಣಿಸಿ, ಅವರೊಡನೆ ಸಹವಾಸ ಮಾಡಿದ ನಂತರ ನಾವು ಅರಸುತ್ತಿದ್ದುದು ಅಂತಹ ವ್ಯಕ್ತಿಯನ್ನಲ್ಲ ಎಂದು ಕಂಡುಕೊಳ್ಳುವುದು ಬಹಳ ದುಃಖದಾಯಕ.

✻ ✻

ಯಾರಿಂದಲಾದರೂ ಆಕರ್ಷಿತರಾಗುವುದಕ್ಕೆ ಒಂದು ಕ್ಷಣ ಸಾಕು, ಅವರನ್ನು ಇಷ್ಟ ಪಡಲು ಒಂದು ಗಂಟೆ ಸಾಕು, ಅವರ ನಡುವೆ ಪ್ರೇಮಾಂಕುರವಾಗಲು ಒಂದು ದಿನ ಸಾಕು. ಆದರೆ ಒಬ್ಬರನ್ನು ಪ್ರೀತಿಸಿ ಮರೆಯಲು ಇಡೀ ಬದುಕೇ ಬೇಕಾಗುವುದು.

✻ ✻

ಯಾರನ್ನಾದರೂ ಪ್ರೀತಿಸಿ ಅವರಿಂದ ನಾವು ಪ್ರೀತಿಸಲ್ಪಡದಿದ್ದಾಗ ಆಗುವ ನೋವಿಗಿಂತಲೂ ಆ ವ್ಯಕ್ತಿಯನ್ನು ಎಷ್ಟು ಪ್ರೀತಿಸುತ್ತೇವೆ ಎಂದು ಹೇಳಲು ಧೈರ್ಯ ಸಾಲದಿರುವುದು ಬಹಳ ದುಃಖದಾಯಕ.

✻ ✻

ನಿಮ್ಮ ಅತ್ಯಂತ ಪ್ರಾಣಪ್ರಿಯ ಸ್ನೇಹಿತರೆಂದರೆ ಯಾರು ಗೊತ್ತೆ? ನಿಮ್ಮೊಡನೆ ಒಂದು ಮಾತನ್ನೂ ಆಡದೆ ಆರಾಮವಾಗಿ ತೂಗುಯ್ಯಾಲೆಯಲ್ಲಿ ಕುಳಿತಿದ್ದು ನಂತರ ಎದ್ದು ಹೋಗುವಾಗ, ತನ್ನ ಬದುಕಿನಲ್ಲಿನ ಅತ್ಯಂತ ಶ್ರೇಷ್ಠ ಸಂವಾದ ನಿಮ್ಮೊಡನೆ ಆಯಿತೆಂಬ ಧನ್ಯತೆಯ ಭಾವದಿಂದ ತೆರಳುವವನು.

✻ ✻

ಅತ್ಯಂತ ಸುಖಿಗಳಾಗಿರುವವರ ಬಳಿಗೆ ಅತ್ಯುತ್ತಮ ವಾದುವುಗಳೇ ಬರುತ್ತವೆ ಎಂದೇನಿಲ್ಲ, ಆದರೆ ತಮ್ಮ ಪಾಲಿಗೆ ಬಂದದ್ದನ್ನು ಅವರು ಅತ್ಯುತ್ತಮವಾಗಿಸುತ್ತಾರೆ, ಅಷ್ಟೇ.

( ವಿವಿಧಮೂಲಗಳಿಂದ ಸಂಗ್ರಹ )

## ಪ್ರಾರ್ಥನೆ

***ದೇವ್ಯಪರಾಧಕ್ಷಮಾಪಣಸ್ತೋತ್ರದಿಂದ***

ನ ಮಂತ್ರಂ ನೋ ಯಂತ್ರಂ ತದಪಿ ಚ ನ ಜಾನೇ ಸ್ತುತಿಮಹೋ  
ನ ಚಾಹ್ವಾನಂ ಧ್ಯಾನಂ ತದಪಿ ಚ ನ ಜಾನೇ ಸ್ತುತಿಕಥಾಃ |  
ನ ಜಾನೇ ಮುದ್ರಾಸ್ತೇ ತದಪಿ ಚ ನ ಜಾನೇ ವಿಲಪನಂ  
ಪರಂ ಜಾನೇ ಮಾತಸ್ತ್ವದನುಸರಣಂ ಕ್ಲೇಶಹರಣಮ್ ||

ಅಯ್ಯೋ! ನನಗೆ ನಿನ್ನ ಮಂತ್ರವಾಗಲಿ ಯಂತ್ರವಾಗಲಿ ಸ್ತುತಿಯಾಗಲಿ ಗೊತ್ತಿಲ್ಲ; ನಿನ್ನ ಆಹ್ವಾನವನ್ನಾಗಲೀ ಧ್ಯಾನವನ್ನಾಗಲೀ ಸ್ತುತಿ ಕಥೆಯನ್ನಾಗಲಿ ನಾನರಿಯೆ; ನಿನ್ನ ಮುದ್ರೆಯೂ ನನಗೆ ತಿಳಿದಿಲ್ಲ; ನಿನ್ನ ಮುಂದೆ ಮೊರೆಯಿಡುವುದನ್ನೂ ನಾನರಿಯೆ; ಆದರೆ ಅಮ್ಮಾ, ನನಗೆ ಇಷ್ಟು ಮಾತ್ರ ಗೊತ್ತು—ನಿನ್ನನ್ನು ಅನುಸರಿಸಿದರೆ ಸಂಕಟವೆಲ್ಲವೂ ನಾಶವಾಗುತ್ತದೆ.

ವಿಧೇರಜ್ಞಾನೇನ ದ್ರವಿಣವಿರಹೇಣಾಲಸತಯಾ  
ವಿಧೇಯಾಶಕ್ಯತ್ವಾತ್ತವ ಚರಣಯೋರ್ಯಾ ಚ್ಯುತಿರಭೂತ್ |  
ತದೇತತ್ ಕ್ಷಂತವ್ಯಂ ಜನನಿ ಸಕಲೋದ್ಧಾರಿಣಿ ಶಿವೇ  
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ||

ಹೇ ಜನನಿ, ವಿಧಿವಿಲಾಸದಿಂದಲೂ, ನನ್ನ ದಾರಿದ್ರ್ಯದಿಂದಲೂ, ಆಲಸ್ಯದಿಂದಲೂ ಮತ್ತು ನಿನಗೆ ವಿಧೇಯನಾಗಿರಲು ಅಶಕ್ಯವಾದುದರಿಂದಲೂ, ನಿನ್ನ ಅಡಿದಾವರೆಗಳಿಂದ ಚ್ಯುತನಾದೆನು; ಹೇ ಸಕಲೋದ್ಧಾರಿಣಿ, ಹೇ ಶಿವೇ ನೀನು ನನ್ನ ಸಕಲಲೋಪದೋಷಗಳನ್ನೂ ಕ್ಷಮಿಸು; ಲೋಕದಲ್ಲಿ ಕುಪುತ್ರ ಹುಟ್ಟಿದರೂ ಹುಟ್ಟಬಹುದು; ಆದರೆ ಕುಮಾತೆ ಎಲ್ಲಿಯೂ ಕಾಣಬರುವುದಿಲ್ಲ.

ಪೃಥಿವ್ಯಾಂ ಪುತ್ರಾಸ್ತೇ ಜನನಿ ಬಹವಃ ಸಂತಿ ಕೃತಿನಃ  
ಪರಂ ತೇಷಾಂ ಮಧ್ಯೇ ವಿರಲತರಲೋಽಹಂ ತವ ಸುತಃ |  
ಮದೀಯೋಽಯಂ ತ್ಯಾಗಃ ಸಮುಚಿತಮಿದಂ ನೋ ತವ ಶಿವೇ  
ಕುಪುತ್ರೋ ಜಾಯೇತ ಕ್ವಚಿದಪಿ ಕುಮಾತಾ ನ ಭವತಿ ||

ಅಮ್ಮಾ! ಈ ಜಗತ್ತಿನಲ್ಲಿ ನಿನಗೆ ಪುಣ್ಯಪುರುಷರಾದ ಎಷ್ಟೋ ಮಕ್ಕಳಿದ್ದಾರೆ; ಅವರ ಮಧ್ಯದಲ್ಲಿ ಈ ನಿನ್ನ ಮಗನಾದ ನಾನು ಕೇವಲ ಅತ್ಯಲ್ಪನಾದವನು. ಹೇ ಮಂಗಳದಾಯಕಿ, ನಾನು ನಿನ್ನನ್ನು ಬಿಟ್ಟಿರುವುದು ಉಚಿತವಾಗಿರಬಹುದು; ಆದರೆ ನೀನು ನನ್ನನ್ನು ಬಿಟ್ಟಿರುವುದು ಉಚಿತವಲ್ಲ; ಏಕೆಂದರೆ, ಕುಪುತ್ರ ಹುಟ್ಟಿದರೂ ಹುಟ್ಟಬಹುದು, ಕುಮಾತೆ ಎಲ್ಲಿಯೂ ಕಾಣಬರುವುದಿಲ್ಲ.